KADW500004722019

<u>ದಿವಾಣಿ  ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ .ನ್ಯಾಯಾಲಯ, ನವಲಗುಂದ</u>

<u>ಉಪಸ್ಥಿತರು</u>

ಶ್ರೀ ಮಂಜುನಾಥ ಪ್ರಭಾಕರ ಪಾನಘಂಟಿ
ಬಿ.ಕಾಂ,. ಎಲ್.ಎಲ್.ಬಿ,

ಹಿರಿಯ ದಿವಾಣಿ  ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ , ನವಲಗುಂದ
ಪ್ರಭಾರ ದಿವಾಣಿ  ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ , ನವಲಗುಂದ.

ತೀರ್ಪಿನ ದಿನಾಂಕಃ **1** ನೇ ಜುಲೈ **2026**

ಸಿ.ಸಿ.ನಂ**.<u>281/2019</u>**

<u>ಪಿರ್ಯಾದಿದಾರರು</u>**:**

1) ಕರ್ನಾಟಕ ರಾಜ್ಯ ಸರ್ಕಾರ ಇವರ ಪರವಾಗಿ.
ಆರಕ್ಷಕ ವೃತ ನಿರೀಕ್ಷಕರು, ನವಲಗುಂದ ಪೋಲಿಸ್ ಠಾಣೆ,
ನವಲಗುಂದ.
(ಸಹಾಯಕ ಸರ್ಕಾರಿ ಅಭಿಯೋಜಕರಿಂದ ಪ್ರತಿನಿಧಿಸಿದೆ.)

- ವಿರುದ್ಧ -

<u>ಆರೋಪಿಗಳುಃ</u>

1) ಬಸಪ್ಪ ಆಸಪ್ಪ ಸೂರೀನ್,
ವಯಸ್ಸುಃ 60 ವರ್ಷ, ಉಃ ಹೊಲಮನೆ ಕೆಲಸ,
ಸಾಃ ತಿರ್ಲಾಪುರ, ತಾಃ ನವಲಗುಂದ.

2) ಯಲ್ಲಪ್ಪ @ ಮುದ್ದು ಬಸಪ್ಪ ಸೂರೀನ್,
ವಯಸ್ಸುಃ 20 ವರ್ಷ, ಉಃ ಹೊಲಮನೆ ಕೆಲಸ,
ಸಾಃ ತಿರ್ಲಾಪುರ, ತಾಃ ನವಲಗುಂದ.

4) ಸಿದ್ದವ್ವ ಕೋಂ ಬಸಪ್ಪ ಸೂರೀನ್,
ವಯಸ್ಸುಃ 48 ವರ್ಷ, ಉಃ ಹೊಲಮನೆ ಕೆಲಸ,
ಸಾಃ ತಿರ್ಲಾಪುರ, ತಾಃ ನವಲಗುಂದ.

(ಶ್ರೀ ಪಿ.ಎಚ್.ಕೆ.,ವಕೀಲರು ಪ್ರತಿನಿಧಿಸಿರುತ್ತಾರೆ)

| | | |
|---|---|---|
| 1. | ಅಪರಾಧ ನಡೆದ ದಿನಾಂಕ | 04.11.2018 |
| 2. | ಅಪರಾಧ ವರದಿಯ ದಿನಾಂಕ | 10.11.2018 |
| 3. | ಪ್ರಥಮ ಮಾಹಿತಿದಾರರ ಹೆಸರು | ಶ್ರೀ ಬಸಪ್ಪ ದೇವಪ್ಪ ಸೂರೀನ್. |
| 4. | ಸಾಕ್ಷ್ಯವನ್ನು ಅಭಿಲೇಖಿಸುವ ಪ್ರಾರಂಭದ ದಿನಾಂಕ | 01.10.2024 |
| 5. | ಸಾಕ್ಷ್ಯವನ್ನು ಅಭಿಲೇಖಿಸುವ ಕೊನೆಯ ದಿನಾಂಕ | 17.02.2026 |
| 6. | ಆರೋಪಿತನ ವಿರುದ್ಧ ಮಾಡಲಾದ ಆಪಾದನೆಗಳು | ಭಾ.ದಂ.ಸಂ.ಕಲಂ. 324, 326, 504, 506 ಸಹ ಕಲಂ 34 |
| 7. | ನ್ಯಾಯಾಧೀಶರ ಅಭಿಪ್ರಾಯ | ದೋಷಾರೋಪಣೆ ಸಾಬೀತಾಗಿರುವುದಿಲ್ಲ. |

**:: ತೀರ್ಪು ::**

ಎಸ್.ಎಚ್.ಓ., ನವಲಗುಂದ ಪೊಲೀಸ್ ಠಾಣೆಯವರು 1, 2 ಮತ್ತು 4 ನೇ ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.**324, 326, 504, 506** ಸಹ ಕಲಂ **34** ರ ಅಡಿಯಲ್ಲಿ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2)** ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇರುತ್ತದೆಃ

ನವಲಗುಂದ ಪೋಲಿಸ ಠಾಣಾ ವ್ಯಾಪ್ತಿಯ ಪೈಕಿ ತಿರ್ಲಾಪೂರ ಗ್ರಾಮದ, ಪಿರ್ಯಾದಿ ಶ್ರೀ ಬಸಪ್ಪ ದೇವಪ್ಪ ಸೂರೀನ್ ಇವರ ಮನೆಯ ಹಿತ್ತಲದಲ್ಲಿ 1 ನೇ ಆರೋಪಿಯ ಹಿರಿಯ ಮಗನಾದ ಯಲ್ಲಪ್ಪ @ ಮುದವಪ್ಪ ಬಸಪ್ಪ ಸೂರಿನ ಇತನು ಈ ಹಿಂದೆ ದಿನಾಲು ರಾತ್ರಿ ಸರಾಯಿ ಕುಡಿದು ರಸ್ತೆಯಲ್ಲಿ ಹೋಗಿ ಬರುವ ಜನರಿಗೆ ಬೈದಾಡುತ್ತಾ ಬಾಯಿ ಮಾಡುತ್ತಿದ್ದಕ್ಕೆ, ಫಿರ್ಯಾದಿದಾರನು ಬುದ್ಧಿಮಾತು ಹೇಳಿದ್ದರ ಸಿಟ್ಟಿನಿಂದ 1, 2 ಮತ್ತು 4 ನೇ ಆರೋಪಿತರು ದಿನಾಂಕ 04.11.2018 ರಂದು ರಾತ್ರಿ 10.45 ಗಂಟೆಗೆ ಸಂಗನಮತ ಮಾಡಿಕೊಂಡು ಬಂದು ಪಿರ್ಯಾದಿಗೆ

ಈ ಬೋಸಡಿ ಮಗಂದು ಬಹಳ ಆಗೇತಿ ಊರಿಗೆ ಬುದ್ಧಿಮಾತು ಹೇಳಾಕ ಬರತ್ತಾನ ಈವನ ಬೀಡಬೇಡರಿ ಅಂತಾ ಅವಾಚ್ಯವಾಗಿ ಬೈದು, 1 ನೇ ಆರೋಪಿ ತನ್ನ ಕೈಯಲ್ಲಿದ್ದ ಕಬ್ಬಿಣದ ರಾಡಿನಿಂದ ಪಿರ್ಯಾದಿಯ ತಲೆಗೆ ಹೊಡೆದು ಭಾರೀ ಗಾಯ ಮಾಡಿದ್ದು, 2 ನೇ ಆರೋಪಿಯು ತನ್ನ ಕೈಯಲ್ಲಿದ್ದ ಬಡಿಗೆಯಿಂದ ಪಿರ್ಯಾದಿಯವರ ಬಲಭುಜಕ್ಕೆ ಹೊಡಿದಿದ್ದು, 4 ನೇ ಆರೋಪಿಯು ಪಿರ್ಯಾದಿಯ ಅಂಗಿಯನ್ನು ಹಿಡಿದು ಎಳೆದಾಡಿದ್ದಲ್ಲದೇ, ಆ ಸಮಯದಲ್ಲಿ ಪಿರ್ಯಾದಿ ಅವರ ತಂದೆ ದೇವಪ್ಪ, ಕಾಕಾ ಶಿದ್ದಲಿಂಗಪ್ಪ ಮತ್ತು ಕಲ್ಲಪ್ಪ ಹಾಗೂ ತಮ್ಮ ಚಿದಾನಂದ ಇವರು ಬಂದು ಬಾಯಿ ಮಾಡಿ ತಂಟೆ ಬಿಡಿಸಿದಾಗ, ಆರೋಪಿತೆಲ್ಲರೂ ಈ ಸಲ ಉಳಕೊಂಡಿ ಮಗನ ಇನ್ನೊಮ್ಮೆ ಸಿಕ್ಕರ ಜೀವ ಸಹಿತ ಬಿಡುವುದಿಲ್ಲ ಅಂತಾ ಜೀವದ ಬೆದರಿಕೆ ಹಾಕಿದ ಅಪರಾಧ.

**3)** ಚಾಸಾ-1 ರವರು ಸಲ್ಲಿಸಿದ ಪ್ರಥಮ ಮಾಹಿತಿಯ ಮೇರೆಗೆ ನವಲಗುಂದ ಪೊಲೀಸರು ಠಾಣೆ ಗುನ್ನೆ ನಂ.172/2018 ರಂತೆ ಪ್ರಕರಣವನ್ನು ದಾಖಲಿಸಿಕೊಂಡಿರುತ್ತಾರೆ. ಚಾಸಾ-8 ರವರು ತನಿಖೆಯನ್ನು ಪೂರೈಸಿ ದೊಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**4)** ಅಂತಿಮ ವರದಿಯ ಆಧಾರದ ಮೇಲೆ ನ್ಯಾಯಾಲಯವು ಆರೋಪಗಳ ಸಂಜ್ಞೆಯನ್ನು ತೆಗೆದುಕೊಂಡು ಸಮನ್ಸ್ ನೀಡಿದ ನಂತರ ಆರೋಪಿತರು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿದ್ದಾನೆ. ದಂ.ಪ್ರ.ಸಂ.ಕಲಂ.207 ರಂತೆ ಅಭಿಯೋಜನ ಪ್ರಕರಣದ ದಾಖಲೆಗಳ ನಕಲುಗಳನ್ನು ನೀಡಲಾಯಿತು. ದೋಷಾರೋಪಣೆ ರಚಿಸಿದ ನಂತರ ಅದರ ಸಾರಾಂಶವನ್ನು ಆರೋಪಿತರಿಗೆ ಓದಿ ಹೇಳಲಾಗಿ ತಾವು ತಪ್ಪು ಮಾಡಿಲ್ಲವೆಂದು ಹೇಳಿದ್ದರಿಂದ ಅಭಿಯೋಜನೆಯವರು ತಮ್ಮ ಪರವಾಗಿ ಒಟ್ಟು 9 ಜನ ಸಾಕ್ಷಿದಾರರನ್ನು ವಿಚಾರಣೆ ಮಾಡಿಕೊಂಡು ಅವರ ಮೂಲಕ 15 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ನಂತರ ಆರೋಪಿತರು ತಮ್ಮ ವಿರುದ್ಧ ಬಂದ ಸಾಕ್ಷ್ಯವನ್ನು ದಂ.ಪ್ರ.ಸಂ.ಕಲಂ.313 ರಡಿಯಲ್ಲಿ ಹೇಳಿಕೆಗಳನ್ನು ದಾಖಲಿಸಿದ್ದು, ಸದರಿಯವರು ಅದನ್ನು ಅಲ್ಲಗಳೆದು ತಮ್ಮ ಪರವಾಗಿ ಯಾವುದೇ ಸಾಕ್ಷ್ಯ ಇಲ್ಲವೆಂದು ನುಡಿದ ಕಾರಣ ಉಭಯತರ ವಾದ ವಿವಾದಗಳನ್ನು ಕೇಳಿ, ಕಡತವನ್ನು ಪರಿಶೀಲಿಸಿದಾಗ, ಈ ಕೆಳಗಿನ ಪ್ರಶ್ನೆಗಳು ನ್ಯಾಯಾಲಯದ ತೀರ್ಮಾನಕ್ಕೆ ಉದ್ಭವಿಸಿರುತ್ತವೆ.

ಅಂಶಗಳು

ಅಂಶ-**1)** ನವಲಗುಂದ ಪೋಲಿಸ ಠಾಣಾ ವ್ಯಾಪ್ತಿಯ ಪೈಕಿ ತಿರ್ಲಾಪೂರ ಗ್ರಾಮದ, ಫಿರ್ಯಾದಿ ಶ್ರೀ ಬಸಪ್ಪ ದೇವಪ್ಪ ಸೂರೀನ್ ಇವರ ಮನೆಯ ಹಿತ್ತಲದಲ್ಲಿ 1 ನೇ ಆರೋಪಿಯ ಹಿರಿಯ ಮಗನಾದ ಯಲ್ಲಪ್ಪ @ ಮುದವಪ್ಪ ಬಸಪ್ಪ ಸೂರಿನ ಇತನು ಈ ಹಿಂದೆ ದಿನಾಲು ರಾತ್ರಿ ಸರಾಯಿ ಕುಡಿದು ರಸ್ತೆಯಲ್ಲಿ ಹೋಗಿ ಬರುವ ಜನರಿಗೆ ಬೈದಾಡುತ್ತಾ ಬಾಯಿ ಮಾಡುತ್ತಿದ್ದಕ್ಕೆ, ಫಿರ್ಯಾದಿದಾರನು ಬುದ್ಧಿಮಾತು ಹೇಳಿದ್ದರ ಸಿಟ್ಟಿನಿಂದ, ಫಿರ್ಯಾದಿಗೆ **1** ನೇ ಆರೋಪಿ ತನ್ನ ಕೈಯಲ್ಲಿದ್ದ ಕಬ್ಬಿಣದ ರಾಡಿನಿಂದ ಫಿರ್ಯಾದಿಯ ತಲೆಗೆ ಹೊಡೆದು ಭಾರೀ ಗಾಯ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ **324** ಸಹಕಲಂ **34** ರನ್ವಯ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ**?**

ಅಂಶ-**2)** ಸದರಿ ಮೇಲೆ ಹೇಳಿದ ದಿನಾಂಕ**,** ಸಮಯ ಮತ್ತು ಸ್ಥಳದಲ್ಲಿ**,** **2** ನೇ ಆರೋಪಿಯು ತನ್ನ ಕೈಯಲ್ಲಿದ್ದ ಬಡಿಗೆಯಿಂದ ಫಿರ್ಯಾದಿಯವರ ಬಲಭುಜಕ್ಕೆ ಹೊಡಿದಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ**.326** ಸಹಕಲಂ **34** ರನ್ವಯ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ**?**

ಅಂಶ-**3)** ಸದರಿ ಮೇಲೆ ಹೇಳಿದ ದಿನಾಂಕ**,** ಸಮಯ ಮತ್ತು ಸ್ಥಳದಲ್ಲಿ**,** **1, 2** ಮತ್ತು **4** ನೇ ಆರೋಪಿತರೆಲ್ಲರೂ ಫಿರ್ಯಾದಿದಾರನಿಗೆ ಈ ಬೋಸಡಿ ಮಗಂದು ಬಾಹಾಳ ಆಗೇತಿ ಊರಿಗೆ ಬುದ್ಧಿಮಾತು ಹೇಳಾಕ ಬರತ್ತಾನ ಈವನ ಬೀಡಬೇಡರಿ ಎಂದು ಅವಾಚ್ಯ ಶಬ್ಧಗಳಿಂದ ಬಾಯಿಗೆ ಬಂದಂತೆ ಬೈದಾಡಿ ಅವಮಾನಗೊಳಿಸಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ**.504** ಸಹಕಲಂ **34** ರನ್ವಯ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ**?**

ಅಂಶ-**4)** ಸದರಿ ಮೇಲೆ ಹೇಳಿದ ದಿನಾಂಕ**,** ಸಮಯ ಮತ್ತು ಸ್ಥಳದಲ್ಲಿ**, 1, 2** ಮತ್ತು **4** ನೇ ಆರೋಪಿತೆಲ್ಲರೂ ಈ ಸಲ ಉಳಕೊಂಡಿ ಮಗನ ಇನ್ನೊಮ್ಮೆ ಸಿಕ್ಕರ ಜೀವ ಸಹಿತ ಬಿಡುವುದಿಲ್ಲ ಅಂತಾ ಪಿರ್ಯಾದಿಗೆ ಜೀವದ ಬೆದರಿಕೆ ಹಾಕಿದ್ದು**,** ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ **506** ಸಹಕಲಂ **34** ರನ್ವಯ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ**?**

ಅಂಶ-**5)** ಏನು ಆದೇಶ **?**

**5)** ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿದೆ.

ಅಂಶ ಸಂಖ್ಯೆ-**1** ರಿಂದ **4 :** ನಕಾರಾತ್ಮಕವಾಗಿ

ಅಂಶ ಸಂಖ್ಯೆ-**5 :**ಈ ಕೆಳಗಿನ ಕಾರಣಗಳಿಗಾಗಿ ಅಂತಿಮ ಆದೇಶದಂತೆ

## ಕಾ ರ ಣ ಗ ಳು

**6)** ಅಂಶ ಸಂಖ್ಯೆ-**1** ರಿಂದ **4**:- ಅಂಶ 1 ರಿಂದ 4 ಗಳು ಒಂದೆ ರೀತಿಯ ಚರ್ಚೆಯ ವಿಷಯಗಳನ್ನು ಹೊಂದಿರುವುದರಿಂದ ಅವುಗಳನ್ನು ಒಟ್ಟಿಗೆ ಚರ್ಚೆಗಾಗಿ ತೆಗೆದುಕೊಳ್ಳಲಾಯಿತು. ಅಭಿಯೋಜನೆಯವರು 1, 2 ಮತ್ತು 4 ನೇ ಆರೋಪಿಗಳ ವಿರುದ್ಧ ಭಾ.ದ.ಸಂ.ಕಾಯ್ದೆ ಕಲಂ **324, 326, 504, 506** ಸಹ ಕಲಂ **34** ರಂತಹ ಆರೋಪಗಳನ್ನು ಹೊರಿಸಿದ್ದು, ಸದರಿ ಆರೋಪಗಳನ್ನು ಸಂಶಯಾತೀತವಾಗಿ ರುಜುವಾತುಪಡಿಸುವ ಹೊಣೆಗಾರಿಕೆ ಅಭಿಯೋಜನೆಯವರ ಮೇಲೆ ಇರುತ್ತದೆ.

**7)** ಅಭಿಯೋಜನೆಯವರು ಪ್ರಕರಣವನ್ನು ರುಜುವಾತುಪಡಿಸಲು ತಮ್ಮ ಪರವಾಗಿ ಒಟ್ಟು 7 ಜನ ಸಾಕ್ಷಿದಾರರನ್ನು ನಮೂದಿಸಿದ್ದು, ಅವರುಗಳಲ್ಲಿ ಚಾ.ಸಾ.1, 2, 5, 7, 4, 6, 9, ಮತ್ತು 10 ರವರನ್ನು ಅ.ಸಾ.1 ರಿಂದ ಅ.ಸಾ.9 ಎಂದು ವಿಚಾರಣೆಗೆ ಒಳಪಡಿಸಿದ್ದು, ತಮ್ಮ ಪರವಾಗಿ ಒಟ್ಟು 15 ದಾಖಲೆ ಸಾಕ್ಷ್ಯಗಳನ್ನು ಹಾಜರುಪಡಿಸಿರುತ್ತಾರೆ.

**8)** ಅಭಿಯೋಜನೆಯವರು ಪ್ರಕರಣವನ್ನು ರುಜುವಾತುಪಡಿಸಲು ಪ್ರಕರಣದ ಪಿರ್ಯಾದಿದಾರರಾದ ಚಾ.ಸಾ.1 ರವರನ್ನು ಅ.ಸಾ.1 ಎಂದು ವಿಚಾರಣೆ ಮಾಡಿದ್ದು, ಸದರಿಯವರು ತಮ್ಮ ಸಾಕ್ಷಿಯಲ್ಲಿ, 2018 ರಲ್ಲಿ ತಾನು ತನ್ನ ಮನೆಗೆ ಡಿಜೈಲ್ ತೆಗೆದುಕೊಂಡು ಬಂದು ವಾಹನಕ್ಕೆ ತುಂಬಿಸಿ ಊಟ ಮಾಡಲು ಹೋದಾಗ, ಆರೋಪಿತರು ಬಂದು ತನ್ನ ಕುತ್ತಿಗೆ ಕಾಲರ್ ಹಿಡಿದು, 1 ನೇ ಆರೋಪಿ ಕಬ್ಬಿನದ ರಾಡನಿಂದ ತನ್ನ ತಲೆಗೆ ಹೊಡೆದಿರುವುದಾಗಿ, ತನಗೆ ಆಸ್ಪತ್ರೆಯಲ್ಲಿ ಪ್ರಜ್ಞೆ ಬಂದಿರುತ್ತದೆ ಎಂದು ಅಭಿಯೋಜನೆಗೆ ಭಾಗಶಃ ಪ್ರತಿ ಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. ಸದಯವರು ತಮ್ಮ ಪಾಟೀಸವಾಲಿನಲ್ಲಿ, ತನ್ನ ಹೆಸರಿಗೆ ಯಾವುದೇ ವಾಹನ ಇರುವುದಿಲ್ಲ ಎಂದು ಹಾಗೂ ಚಾ.ಸಾ.4 ರಿಂದ 7 ರವರು ತಮ್ಮ ಸಂಬಂಧಿಕರು ಎಂದು ನುಡಿದಿರುತ್ತಾರೆ. ಸದರಿ ಅಂಶವನ್ನು ಹೊರತುಪಡಿಸಿ, ಆರೋಪಿ ಪರ ವಕೀಲರು ತಮಗೆ ಅನುಕೂಲವಾಗುವಂತಹ ಯಾವುದೇ ಅಂಶಗಳನ್ನು ಸಾಕ್ಷಿಯಿಂದ ಹೇಳಿಸಿಕೊಂಡಿರುವುದಿಲ್ಲ

**9)** ಅಭಿಯೋಜನೆಯವರು ಪ್ರಕರಣದ ಪಂಚರಾದ ಚಾ.ಸಾ.2 ರವರನ್ನು ಅ.ಸಾ.2 ಎಂದು ವಿಚಾರಣೆ ಮಾಡಿದ್ದು, ಸದರಿಯವರು ತಮ್ಮ ಸಾಕ್ಷಿಯಲ್ಲಿ, ಪೋಲಿಸರು ತನ್ನ ಸಮಕ್ಷಮ ಪಂಚನಾಮೆ ಮಾಡಿದ್ದು, ತಾನು ಅದಕ್ಕೆ ಸಹಿ ಮಡಿರುವುದಾಗಿ ಮತ್ತು ಪಂಚನಾಮೆಯ ಕಾಲಕ್ಕೆ ಮುದ್ದೆಮಾಲುಗಳನ್ನು ಜಪ್ತಿ ಪಡಿಸಿಕೊಂಡಿರುವುದಾಗಿ ನುಡಿದಿರುತ್ತಾರೆ. ಸದರಿಯವರು ತಮ್ಮ ಪಾಟೀಸವಾಲಿನಲ್ಲಿ, ತನಗೆ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ ಹಾಗೂ ಪೋಲಿಸರು ಹೇಳಿದ ಮೇರೆಗೆ ತಾನು ಸಹಿ ಮಾಡಿದ್ದು, ಪೋಲಿಸರು ತಿಳಿಸಿದ ಮೇರೆಗೆ ಛಾಯಾಚಿತ್ರಯನ್ನು ತೆಗೆಸಿಕೊಂಡಿರುವುದಾಗಿ ನುಡಿದಿರುತ್ತಾರೆ. ಕಾರಣ, ಸದರಿಯವರ ಸಾಕ್ಷ್ಯ ಅಭಿಯೋಜನೆ ಪ್ರಕಣಕ್ಕೆ ಯಾವುದೇ ಸಹಾಯಕಾರಿಯಾಗಿರುವುದಿಲ್ಲ.

**10)** ಅಭಿಯೋಜನೆಯವರು ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾದ ಚಾ.ಸಾ.5 ರವರನ್ನು ಅ.ಸಾ.3 ಎಂದು ಹಾಗೂ ಚಾ.ಸಾ.7 ರವರನ್ನು ಅ.ಸಾ.4 ಎಂದು ವಿಚಾರಣೆ ಮಾಡಿದ್ದು, ಸದರಿಯವರಿಬ್ಬರೂ ತಮ್ಮ ಸಾಕ್ಷಿಯಲ್ಲಿ, 2018 ರಲ್ಲಿ ಸಂಜೆ 6.00 ಗಂಟೆಗೆ ಚಾ.ಸಾ.1 ಹಾಗೂ ಆರೋಪಿತರ ನಡುವೆ ಜಗಳ ಆಗಿದ್ದು, 1 ನೇ ಆರೋಪಿಯು ಕಬ್ಬಿಣದ ರಾಡ್‌ನಿಂದ ಚಾ.ಸಾ.1 ರವರಿಗೆ ತಲೆಗೆ ಹಾಗೂ

2 ನೇ ಆರೋಪಿಯು ಬಡಿಗೆಯಿಂದ ಚಾ.ಸಾ.1 ರವರ ತಲೆ, ಭುಜ ಹಾಗೂ ಕೈಗೆ ಹೊಡಿದಿರುವುದಾಗಿ ನುಡಿದಿರುತ್ತಾರೆ. ಸದರಿಯವರಿಬ್ಬರನ್ನು ಅಭಿಯೋಜನೆಯವರು ಭಾಗಶಃ ಪ್ರತಿಕೂಲ ಸಾಕ್ಷಿಗಳೆಂದು ಪರಿಗಣಿಸಿದ್ದು ಇರುತ್ತದೆ. ಸದರಿಯವರಿಬ್ಬರ ಪಾಟೀಸವಾಲಿನಲ್ಲಿ ಆರೋಪಿ ಪರ ವಕೀಲರು ತಮಗೆ ಅನುಕೂಲವಾಗುವಂತಹ ಅಂಶಗಳನ್ನು ಹೇಳಿಸಿಕೊಂಡಿರುವುದಿಲ್ಲ.

**11)** ಅಭಿಯೋಜನೆಯವರು ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾದ ಚಾ.ಸಾ.4 ರವರನ್ನು ಅ.ಸಾ.5 ಎಂದು ಹಾಗೂ ಚಾ.ಸಾ.6 ರವರನ್ನು ಅ.ಸಾ.6 ಎಂದು ವಿಚಾರಣೆ ಮಾಡಿದ್ದು, ಸದರಿಯವರಿಬ್ಬರೂ ತಮ್ಮ ಸಾಕ್ಷಿಯಲ್ಲಿ, ಅಂದಾಜು 6 ವರ್ಷಗಳ ಹಿಂದೆ 1 ನೇ ಆರೋಪಿ ಹಾಗೂ ಚಾ.ಸಾ.1 ರವರ ನಡುವೆ ನೀರಿನ ವಿಷಯವಾಗಿ ಜಗಳ ಉಂಟಾಗಿದ್ದು, ತಾವು ಜಗಳ ಬಿಡಿಸಿರುವುದಾಗಿ ನುಡಿದಿದ್ದು, ಆದರೆ ಚಾ.ಸಾ.1 ಹಾಗೂ ಆರೋಪಿತರ ನಡುವೆ ಆದ ಜಗಳದ ಬಗ್ಗೆ ತಮಗೆ ವಿವರವಾಗಿ ಗೊತ್ತಿಲ್ಲ ಎಂದು ಅಭಿಯೋಜನೆ ಪ್ರಕರಣಕ್ಕೆ ಸಂಪೂರ್ಣ ಪ್ರತಿಕೂಲ ಸಾಕ್ಷಿಯನ್ನು ನುಡಿದಿರುತ್ತಾರೆ.

**12)** ಅಭಿಯೋಜನೆಯವರು ಪ್ರಕರಣದ ತನಿಖಾಧಿಕಾರಿಗಳಾದ ಚಾಸಾ.10 ರವರನ್ನು ಅಸಾಃ 9 ಎಂದು ವಿಚಾರಣೆ ಮಾಡಿದ್ದು, ಸದರಿಯವರು ತಾವು ಕೈಗೊಂಡ ತನಿಖೆಯ ಕುರಿತು, ಪ್ರ.ವ.ವರದಿಯನ್ನು ದಾಖಲಿಸಿಕೊಂಡ ಬಗ್ಗೆ, ಪಂಚನಾಮೆ ಪೂರೈಸಿದ ಬಗ್ಗೆ, ಹೇಳಿಕೆಗಳನ್ನು ಪಡೆದುಕೊಂಡ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ.

**13)** ಅಭಿಯೋಜನೆಯವರು ಚಾ.ಸಾ.1 ಮತುತ 4 ರವರನ್ನು ಉಪಚರಿಸಿದ ವೈದ್ಯರಾದ ಚಾ.ಸಾ.8 ಮತ್ತು 9 ರವರನ್ನು ಅ.ಸಾ.8 ಮತ್ತು 7 ಎಂದು ವಿಚಾರಣೆ ಮಾಡಿದ್ದು, ಸದರಿಯವರು ತಾವು ನೀಡಿದ ಚಿಕಿತ್ಸೆಯ ಕುರಿತು ಹಾಗೂ ಚಾ.ಸಾ.1 ಮತ್ತು 4 ರವರಿಗೆ ಆದ ಗಾಯದ ಕುರಿತು ಸಾಕ್ಷಿ ನುಡಿದಿರುತ್ತಾರೆ. ಸದರಿಯವರಿಬ್ಬರ ಪಾಟೀಸವಾಲಿನಲ್ಲಿ ಆರೋಪಿ ಪರ ವಕೀಲರು ತಮಗೆ ಅನುಕೂಲವಾಗುವಂತಹ ಅಂಶಗಳನ್ನು ಹೇಳಿಸಿಕೊಂಡಿರುವುದಿಲ್ಲ.

**14)** ಪ್ರಸ್ತುತ ಪ್ರಕರಣದಲ್ಲಿ ಚಾ.ಸಾ.1, 4 ರಿಂದ 7 ರವರು ಪರಸ್ಪರ ಸಂಬಂಧಿಕರಾಗಬೇಕು. ಪ್ರಕರಣದ ದೂರು ನಿ.ಪಿ.1 ನ್ನು ಗಮನಿಸಿದಾಗ ಕಂಡುಬರುವ ಅಂಶವೇನೆಂದರೆ, ಘಟನೆಯು ದಿನಾಂಕ 04.11.2018 ರ ರಾತ್ರಿ 10.45 ಗಂಟೆಗೆ ಆಗಿರುತ್ತದೆ. ಆದರೆ ಸದರಿ ದೂರು ದಿನಾಂಕ 10.11.2018 ರಂದು ಅಂದರೆ ಘಟನೆ ನಡೆದ 6 ದಿನಗಳ ಬಳಿಕ ದೂರು ಸಲ್ಲಿಸಿದ್ದು, ಸದರಿ ದೂರನ್ನು ಸಲ್ಲಿಸುವಲ್ಲಿ ಆದ ವಿಳಂಬದ ಕುರಿತು ಚಾ.ಸಾ.1 ರವರು ದೂರಿನಲ್ಲಾಗಲೀ ಅಥವಾ ಸಾಕ್ಷಿಯಲ್ಲಾಗಲೀ ಸೂಕ್ತವಾದ ಕಾರಣ ನೀಡಿರುವುದಿಲ್ಲ. ಈ ಹಂತದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದವರು ಆಂಧ್ರ ಪ್ರದೇಶ ವಿರುದ್ಧ ಎಂ. ಮಧುಸೂದನರಾವ ಎಂಬ **(2008) 15 SCC 582** ಉಲ್ಲೇಖಿತ ತೀರ್ಪಿನಲ್ಲಿ ಹೇಳಿದ ಒಂದು ಅಂಶ ಬಹು ಮುಖ್ಯ ಪಾತ್ರವನ್ನು ವಹಿಸುತ್ತದೆ. ಸದರಿ ತೀರ್ಪಿನ ಭಾಗ ಈ ಕೆಳಕಂಡಂತೆ ಇರುತ್ತದೆ.

> ***"Time and again, the object and importance of prompt lodging of the First Information Report has been highlighted. Delay in lodging the First Information Report, more often than not results in embellishment and exaggeration, which is a creature of an afterthought. A delayed report not only gets bereft of the advantage of spontaneity, the danger of the introduction of colored version, exaggerated account of the incident or a concocted story as a result of deliberations and consultations. Also creeps in, casting a serious doubt on its veracity. Therefore it is essential that the delay in lodging the report should be satisfactorily explained."***

ಸದರಿ ಮೇಲ್ಕಾಣಿಸಿದ ತೀರ್ಪುನ್ನು ಅವಲೋಕಿಸಿದಾಗ ಮ್ಯಾನ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ ದೂರನ್ನು ಸಲ್ಲಿಸುವಲ್ಲಿ ಆದ ವಿಳಂಬದ ಕಾರಣಗಳನ್ನು ಪಿರ್ಯಾದಿದಾರರು ವಿವರಿಸುವುದು ಅತ್ಯವಶ್ಯವಾಗಿರುತ್ತದೆ. ಪ್ರತಿ ದಿನದ ವಿಳಂಬವನ್ನು ಸಹ ಪಿರ್ಯಾದಿದಾರರು

ವಿವರಿಸುವುದು ಅತ್ಯವಶ್ಯವಾಗಿರುತ್ತದೆ. ಆದರೆ ಇಲ್ಲಿ 6 ದಿನಗಳ ಕಾಲ ಅತೀವ ವಿಳಂಬವಾಗಿದ್ದು, ಸದರಿ ವಿಳಂಬದ ಬಗ್ಗೆ ಯಾವುದೇ ಸೂಕ್ತ ಕಾರಣಗಳನ್ನಾಗಲಿ, ದಾಖಲೆಗಳನ್ನಾಗಲೀ ಒದಗಿಸುವಲ್ಲಿ ಚಾಸಾ.1 ರವರು ಸಂಪೂರ್ಣವಾಗಿ ವಿಫಲಾಗಿರುತ್ತಾರೆ.

**15)** ಪ್ರಸ್ತುತ ಪ್ರಕರಣದಲ್ಲಿ ಚಾ.ಸಾ.1, 5 ಮತ್ತು 7 ರವರು ಮಾತ್ರ ಪ್ರಕರಣವನ್ನು ಭಾಗಶಃ ಬೆಂಬಲಿಸಿದ್ದು, ಉಳಿದ ಸಾಕ್ಷಿದಾರರು ಹಾಗೂ ಚಾ.ಸಾ.1 ರವರ ಸಂಬಂಧಿಕರಾದ ಚಾ.ಸಾ.4 ಮತ್ತು 6 ರವರು ಪ್ರಕರಣವನ್ನು ಬೆಂಬಲಿಸಿ ಸಾಕ್ಷಿ ನುದಿರುವುದಿಲ್ಲ. ಅ.ಸಾ.1 ರವರು ಸದರಿ ಘಟನೆ ರಾತ್ರಿ 9.30 ರ ಸುಮಾರಿಗೆ ಆಗಿದೆ ಎಂದು ತೋರಿಸಿದ್ದರೆ, ಚಾ.ಸಾ.5 ವರು ಸದರಿ ಘಟನೆ ಸಂಜೆ 6.00 ಗಂಟೆಗೆ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಸದರಿಯವರಿಬ್ಬರ ಸಾಕ್ಷ್ಯಗಳನ್ನು ಕೂಲಂಕುಷವಾಗಿ ಗಮನಿಸಿದಾಗ, ಸದರಿಯವರಿಬ್ಬರ ಸಾಕ್ಷ್ಯದ ನಡುವೆ ಸಾಮ್ಯತೆಗಳು ಇರದೇ, ಸಾಕಷ್ಟು ವ್ಯತಿರಿಕ್ತ ಅಂಶಗಳು ಇದ್ದು, ಒಂದಕ್ಕೊಂದು ಪೂರಕವಾಗಿರುವುದಿಲ್ಲ. ಇದೂ ಅಲ್ಲದೇ, ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾದ ಚಾ.ಸಾ. 4 ಮತ್ತು 6 ರವರು ಅಭಿಯೋಜನೆ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಕಾರಣ ದೂರನ್ನು ಸಲ್ಲಿಸುವಲ್ಲಿ ಆದ ಅತೀವ ವಿಳಂಬ, ಸಾಕ್ಷಿದಾರರ ಇಚ್ಛಾಶಕ್ತಿಯ ಕೊರತೆ, ಪ್ರತ್ಯಕ್ಷ ಸಾಕ್ಷಿದಾರರ ಪ್ರತಿಕೂಲ ಸಾಕ್ಷ್ಯ ಇವೆಲ್ಲವನ್ನು ಗಮನಿಸಿದಾಗ, ಅಭಿಯೋಜನೆಯವರು ಪ್ರಕರಣವನ್ನು ಸಂಶಯಾತೀತವಾಗಿ ರುಜುತುಪಡಿಸುವಲ್ಲಿ ಸಂಪೂರ್ಣ ವಿಫಲವಾಗಿರುವುದು ಕಂಡು ಬರುತ್ತದೆ. ಕಾರಣ ಸದರಿ ಸಂಶಯದ ಲಾಭವನ್ನು ಆರೋಪಿತರಿಗೆ ನೀಡುತ್ತಾ ಈ ಅಂಶವನ್ನು ನಕಾರಾತ್ಮವಾಗಿ ಉತ್ತರಿಸಲಾಗಿದೆ.

**16)** <u>ಅಂಶ ಸಂಖ್ಯೆ</u>**-5:-** ಈ ಮೇಲಿನ ಕಾರಣಗಳಿಗಾಗಿ ಈ ಕೆಳಗಿನಂತೆ ಆದೇಶಿಸಲಾಗಿದೆ;

<u>ಆದೇಶ</u>

ದಂಡ ಪ್ರಕ್ರಿಯ ಸಂಹಿತೆ ಕಲಂ **255(1)** ರಡಿಯಲ್ಲಿ ಪ್ರದತ್ತವಾದ ಅಧಿಕಾರದ ಮೇರೆಗೆ **1, 2** ಮತ್ತು **4** ನೇ ಆರೋಪಿತರನ್ನು ಭಾರತೀಯ ದಂಡ ಸಂಹಿತೆ ಕಲಂ**.324, 326, 504, 506** ಸಹ ಕಲಂ **34** ರ ಅಡಿಯಲ್ಲಿನ ಅಪರಾಧಗಳಿಂದ ಬಿಡುಗಡೆಗೊಳಿಸಲಾಗಿದೆ.

**1, 2** ಮತ್ತು **4**ನೇ ಆರೋಪಿತರು ಹಾಗೂ ಅವರ ಜಾಮೀನುದಾರರ ಜಾಮೀನು ಮುಚ್ಚಳಿಕೆಗಳನ್ನು ರದ್ದುಪಡಿಸಲಾಗಿದೆ.

**1, 2** ಮತ್ತು **4**ನೇ ಆರೋಪಿತರು ಹಾಗೂ ಅವರ ಜಾಮೀನುದಾರರು ಕಲಂ**.437(**ಎ**)**ರ ಅಡಿಯಲ್ಲಿ ಬರೆದು ಕೊಟ್ಟ ಜಾಮೀನು ಮುಚ್ಚಳಿಕೆಗಳು **6** ತಿಂಗಳ ನಂತರ ರದ್ದುಗೊಳ್ಳುತ್ತವೆ**.**

**(**ಮೇಲಿನ ತೀರ್ಪನ್ನು ಶೀಘ್ರಲಿಪಿಗಾರನಿಗೆ ಉಕ್ತಲೇಖನ ಕೊಟ್ಟು**,** ಅವರು ಬೆರಳಚ್ಚು ಮಾಡಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕಃ **1** ನೇ ಜುಲೈ **2026** ರಂದು ತೆರೆದ ನ್ಯಾಯಾಲಯದಲ್ಲಿ ಉಚ್ಚರಿಸಲ್ಪಟ್ಟಿತ್ತು**.)**

**(**ಮಂಜುನಾಥ ಪ್ರಭಾಕರ ಪಾನಘಂಟಿ**,)**
ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ**.**ಎಂ**.**ಎಫ್**.**ಸಿ
ಪ್ರಭಾರ ದಿವಾಣಿ ನ್ಯಾಯಾಧೀಶರು ಮತ್ತು ಜೆ**.**ಎಂ**.**ಎಫ್**.**ಸಿ
ನವಲಗುಂದ**.**

**:: <u>ಅನುಬಂಧ</u> ::**

**1)** <u>ಅಭಿಯೋಜನೆ ಪರವಾಗಿ ವಿಚಾರಿಸಿಕೊಂಡ ಸಾಕ್ಷಿದಾರರ ವಿವರ</u>

ಅಸಾ-1 : ಬಸಪ್ಪ ದೇವಪ್ಪ ಸೂರಿನ.

ಅಸಾ-2 : ಶಂಕರಯ್ಯಾ ರುದ್ರಯ್ಯಾ ಹಿರೇಮಠ.

ಅಸಾ-3 : ದೇವಪ್ಪ ಮಲ್ಲಪ್ಪ ಸೂರಿನ.

ಅಸಾ-4 : ಕಲ್ಲಪ್ಪ ಮಲ್ಲಪ್ಪ ಸೂರಿನ.

ಅಸಾ-5 : ಸಿದ್ದಲಿಂಗಪ್ಪ ಮಲ್ಲಪ್ಪ ಸೂರಿನ.

ಅಸಾ-6 : ಚಿದಾನಂದ ದೇವಪ್ಪ ಸೂರಿನ.

ಅಸಾ-7 : ಡಾ. ನಾಗರಾಜ ಚಂಡಿ.

ಅಸಾ-8 : ಡಾ. ಯೋಗೇಂದ್ರನಾಥ ಅಣ್ಣಿಗೇರಿ.

ಅಸಾ-9 : ಯಲ್ಲಪ್ಪ ದ್ಯಾಮಪ್ಪ ಗಿರಿಯಪ್ಪನವರ.

**2)** <u>ಅಭಿಯೋಜನೆ ಪರವಾಗಿ ಗುರುತಿಸಿದ ದಾಖಲಾತಿಗಳ ವಿವರ</u>

ನಿಪಿ-**1** **:** ದೂರು**.**

ನಿಪಿ-**2** **:** ಭಾವಚಿತ್ರ**.**

ನಿಪಿ-**3** **:** ಪಂಚನಾಮೆ**.**

ನಿಪಿ-**4** **:** ಅ**.**ಸಾ**.4** ರವರ ಹೇಳಿಕೆಯ ಅಲ್ಲಗಳೆದ ಭಾಗ**.**

ನಿಪಿ-**5** **:** ಅ**.**ಸಾ**.5** ರವರ ಹೇಳಿಕೆಯ ಅಲ್ಲಗಳೆದ ಭಾಗ**.**

ನಿಪಿ-**6** **:** ಅ**.**ಸಾ**.6** ರವರ ಹೇಳಿಕೆಯ ಅಲ್ಲಗಳೆದ ಭಾಗ**.**

ನಿಪಿ-**7** **:** ಗಾಯದ ಪ್ರಮಾಣಪತ್ರ**.**

ನಿಪಿ-**8** **:** ಗಾಯದ ಪ್ರಮಾಣಪತ್ರ**.**

ನಿಪಿ-**9** **:** ಪ್ರಥಮ ವರ್ತಮಾನ ವರದಿ**.**

ನಿಪಿ-**10** **:** ಹೇಳಿಕೆ**.**

ನಿಪಿ-**11** **:** ಪಿ**.**ಎಫ್**.**

ನಿಪಿ-**12** **:** ಕೈದಿಗಳ ಶೋಧನೆ ರಿಜಿಸ್ಟರ್**.**

ನಿಪಿ-**13** **:** ಕೈದಿಗಳ ಶೋಧನೆ ರಿಜಿಸ್ಟರ್**.**

ನಿಪಿ-**14** **:** ಜಾಮೀನು ಬಂಧಪತ್ರ**.**

ನಿಪಿ-**15** **:**ಜಾಮೀನು ಬಂಧಪತ್ರ **.**

ನಿಪಿ-**16** **:** ನೋಟೀಸ್**.**

**3)** <u>ಆರೋಪಿತನ ಪರವಾಗಿ ವಿಚಾರಿಸಿಕೊಂಡ ಸಾಕ್ಷಿದಾರರ ವಿವರ</u>

ಇಲ್ಲಾ

**4)** <u>ಆರೋಪಿತನ ಪರವಾಗಿ ಗುರುತಿಸಿಕೊಂಡ ದಾಖಲೆಗಳ ವಿವರ</u>

ಇಲ್ಲಾ

**5)** <u>ಮುದ್ದೆಮಾಲಿನ/ಜಪ್ತಾದ ವಸ್ತುಗಳ ಬಗ್ಗೆ ವಿವರ</u>

ಮು.ಮಾ **-1** : ಕಬ್ಬಿಣದ ರಾಡ್.

ಮು.ಮಾ **-2** : ಬಡಿಗೆಗಳು.

(ಮಂಜುನಾಥ ಪ್ರಭಾಕರ ಪಾನಘಂಟಿ,)
ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪ್ರಭಾರ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ನವಲಗುಂದ.